# ಸಾರ್ವಜನಿಕರೇ ಗಮನಿಸಿ

# ಡೆಂಗೀ ಹಾಗೂ ಚಿಕೂನ್‌ಗುನ್ಯ ನಿಯಂತ್ರಣಕ್ಕೆ ಸಹಕರಿಸಿ



**ಡೆಂಗೀ ಹಾಗೂ ಚಿಕೂನ್‌ಗುನ್ಯ** ಜ್ವರಗಳು ಸೋಂಕು ಹೊಂದಿದ ಈಡೀಸ್ ಈಜಿಪ್ಟೈ ಎಂಬ ಸೊಳ್ಳೆಯ ಕಡಿತದಿಂದ ಬರುತ್ತವೆ. ನಿಂತ ಸ್ವಚ್ಛ ನೀರಿನಲ್ಲಿ ಹುಟ್ಟುವ ಈ ಸೊಳ್ಳೆ ಸಾಧಾರಣವಾಗಿ ಹಗಲಿನಲ್ಲಿ ಕಚ್ಚುತ್ತದೆ. ಈಡೀಸ್ ಈಜಿಪ್ಟೈ ಸೊಳ್ಳೆಯು ತನ್ನ ಜೀವನ ಚಕ್ರವನ್ನು ಪೂರ್ಣಗೊಳಿಸಲು ಸುಮಾರು 8 ರಿಂದ 10 ದಿನಗಳನ್ನು ತೆಗೆದುಕೊಳ್ಳುತ್ತದೆ. 7 ದಿನಗಳ ಮೊದಲ 3 ಹಂತಗಳು ಚಿತ್ರದಲ್ಲಿ ತೋರಿಸಿದಂತೆ ಹೀಗಿವೆ. ಮೊಟ್ಟೆ, ಲಾರ್ವ, ಪ್ಯೂಪಾ ಈ ಪ್ರಕ್ರಿಯೆಯು ನೀರಿನಲ್ಲಿ ನಡೆಯುತ್ತದೆ.

**ಲಕ್ಷಣಗಳು :** ಹಠಾತ್ತನೆ ಬರುವ ಅಧಿಕ ಜ್ವರ, ತೀವ್ರ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ತೀವ್ರತರ ನೋವು, ಮೈ ನೋವು, ಕೀಲುಗಳಲ್ಲಿ ನೋವು, ವಾಕರಿಕೆ ಮತ್ತು ವಾಂತಿ.

**ವೈದ್ಯಕೀಯ ಉಪಚಾರ :** ರೋಗದ ಲಕ್ಷಣ ಕಂಡೊಡನೆ ಉಚಿತ ಚಿಕಿತ್ಸೆಗಾಗಿ ಹತ್ತಿರದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಸ್ಪತ್ರೆಯನ್ನು ಸಂಪರ್ಕಿಸಿ, ವೈದ್ಯರಿಂದ ಪರೀಕ್ಷೆ ಮಾಡಿಸಿ ಸೂಕ್ತ ಚಿಕಿತ್ಸೆ ಪಡೆಯಿರಿ.

**ಮುನ್ನೆಚ್ಚರಿಕೆ :** ಚಿತ್ರದಲ್ಲಿ ತೋರಿಸಿದಂತೆ ಸಿಮೆಂಟ್ ತೊಟ್ಟಿಗಳು, ಪ್ಲಾಸ್ಟಿಕ್ ತೊಟ್ಟಿಗಳು, ಬಕೆಟ್‌ಗಳು, ಡ್ರಂಗಳು, ಬ್ಯಾರಲ್‌ಗಳು, ಖಾಲಿ ಡಬ್ಬಗಳು, ಏರ್‌ಕೂಲರ್‌ಗಳು, ಗಡಿಗೆ, ಗಡಿಗೆ ತುಂಡುಗಳು, ತೆಂಗಿನ ಚಿಪ್ಪುಗಳು, ಹಳೆಯ / ಒಡೆದ ಟೈರ್‌ಗಳು, ಹೀಗೆ ಎಲ್ಲೆಲ್ಲಿ ಸ್ವಚ್ಛ ನೀರು ನಿಲ್ಲಬಹುದೋ ಅಲ್ಲೆಲ್ಲಾ ಈ ಸೊಳ್ಳೆಗಳು ಹೇರಳವಾಗಿ ಉತ್ಪತ್ತಿಯಾಗುತ್ತವೆ.

ಎಲ್ಲಾ ನೀರಿನ ತೊಟ್ಟಿಗಳು, ಡ್ರಂ, ಬ್ಯಾರಲ್‌ಗಳು, ಏರ್ ಕೂಲರ್ ಇತ್ಯಾದಿಗಳನ್ನು ವಾರಕ್ಕೊಮ್ಮೆ ಖಾಲಿ ಮಾಡಿ ಸ್ವಚ್ಛಪಡಿಸಿ, ಮತ್ತೆ ಭರ್ತಿ ಮಾಡಿಕೊಳ್ಳುವುದು / ಮುಚ್ಚಳದಿಂದ ಮುಚ್ಚುವುದು, ಬಯಲಿನಲ್ಲಿರುವ ತ್ಯಾಜ್ಯ ವಸ್ತುಗಳಾದ ಒಡೆದ ಬಾಟಲಿ ಮುಂತಾದವುಗಳಲ್ಲಿ ಮಳೆ ನೀರು ಸಂಗ್ರಹವಾಗದಂತೆ ಎಚ್ಚರವಹಿಸುವುದು ಅಥವಾ ಸೂಕ್ತ ವಿಲೇವಾರಿ ಮಾಡುವುದು ಅತ್ಯಗತ್ಯ.

ಆರೋಗ್ಯ ಇಲಾಖೆಯಿಂದ ಹಮ್ಮಿಕೊಂಡ ಸೊಳ್ಳೆ ನಿಯಂತ್ರಣ ಕ್ರಮಗಳಿಗೆ ಸಹಕಾರ ನೀಡುವುದು.

ಸ್ವಯಂ ರಕ್ಷಣಾ ವಿಧಾನಗಳಾದ ಸೊಳ್ಳೆ ನಿರೋಧಕಗಳನ್ನು ಹಾಗೂ ಸೊಳ್ಳೆ ಪರದೆಯನ್ನು ಬಳಸುವುದು ಹಾಗೂ ಹಗಲಿನಲ್ಲಿ ಸೊಳ್ಳೆಗಳ ಕಚ್ಚುವಿಕೆಯಿಂದ ದೂರವಿರುವುದು.

**ಸೊಳ್ಳೆ ಉತ್ಪತ್ತಿ ತಾಣಗಳು :** ● ಒಡೆದ ಟೈರ್‌ಗಳು ● ತೆಂಗಿನ ಚಿಪ್ಪುಗಳು ● ಸಿಮೆಂಟ್ ತೊಟ್ಟಿಗಳು ● ತೆರೆದ ಪ್ಲಾಸ್ಟಿಕ್ ತೊಟ್ಟಿಗಳು ● ಬಕೆಟ್‌ಗಳು ● ನೀರಿನ ತೊಟ್ಟಿಗಳು ● ಏರ್‌ಕೂಲರ್‌ಗಳು ● ಹೂವಿನ ಕುಂಡಗಳ ತಟ್ಟೆಗಳು ಇತ್ಯಾದಿಗಳು.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ದೊರೆಯುತ್ತದೆ.**



ನೀರಿನ ತೊಟ್ಟಿಗಳು



ಏರ್‌ಕೂಲರ್‌ಗಳು



ಹೂವಿನ ಕುಂಡಗಳ ತಟ್ಟೆಗಳು




ಬಕೆಟ್‌ಗಳು



ಸಿಮೆಂಟ್ ತೊಟ್ಟಿಗಳು



ತೆಂಗಿನ ಚಿಪ್ಪುಗಳು




**ನೀರು ನಿಲ್ಲದಂತೆ ಸಹಕರಿಸಿ - ಸೊಳ್ಳೆ ಉತ್ಪತ್ತಿ ತಡೆಗಟ್ಟಿರಿ**

**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :**

ಆರೋಗ್ಯಾಧಿಕಾರಿ (ಪೂರ್ವ) : 22975850, ಆರೋಗ್ಯಾಧಿಕಾರಿ (ದಕ್ಷಿಣ) : 22975750 ಆರೋಗ್ಯಾಧಿಕಾರಿ (ಪಶ್ಚಿಮ) : 22975650
ನಿಯಂತ್ರಣ ಕೊಠಡಿ : 22660000, 22221188, 22100031.

ಮಹಾಪೌರರು | ಉಪ ಮಹಾಪೌರರು | ಅಧ್ಯಕ್ಷರು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ | ಆಯುಕ್ತರು

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

## ATTENTION TO PUBLIC

# Protect yourself from Dengue & Chikungunya



**DENGUE and CHIKUNGUNYA** are viral diseases which spread through the bite of infected Aedes Aegypti mosquito. It breeds in CLEAN STAGNANT WATER and normally bites during the day. Babies, elderly people and individuals resting / sleeping during the day should be protected against mosquito bites. Aedes Aegypti mosquito takes around 8 to 10 days to complete it's life cycle. The first three stages of 7 days are as follows : Egg, Larvae, Pupa. This process happens in the water.

**SYMPTOMS :** Sudden high fever, Skin rashes, Severe head ache, Retro orbital Pain, body ache, Pain in the joints, Nausea and vomiting.

**TREATMENT :** Contact any Bruhat Bangalore Mahanagara Palike Hospital immediately when these symptoms are found and get suitable treatment by the doctors.

**PREVENTIVE MEASURES :** As shown in the picture, these mosquitoes are born in large numbers in the cement tanks, Plastic tanks, Buckets, Drums, Barrels, Empty Containers, Pots, Pot pieces, Coconut shells, old / broken tyres and those places where clean water can stagnate.

Clean all the water tanks, drums, barrels, air coolers etc., at least once in a week and then fill up / close with airtight lids. It is necessary to take care that no rain water is collected in the discarded materials in your premises. You can also dispose them off.

Please cooperate with the mosquito control measures undertaken by the Health Department.

Follow mosquito repellent methods. Use mosquito nets; protect against mosquito bites in the day time.

**MOSQUITO BREEDING SPOTS :** • Old - Broken tyres • Coconut shells • Cement Tanks • Open Plastic tanks • Buckets • Water tanks • Air coolers • Flower Pot Plates Etc.,

**FREE TREATMENT IS AVAILABLE IN THE BRUHAT BANGALORE MAHANAGARA PALIKE HOSPITALS.**


WATER TANKS


AIR COOLERS


FLOWER POT PLATES



BUCKETS


CEMENT TANKS


COCONUT SHELLS




**AVOID STAGNANT WATER - ELIMINATE MOSQUITO BREEDING**

**For further information contact :**

Health officer(East) : 22975850, Health officer(South) : 22975750, Health officer (West): 22975650,
Control Room : 2660000, 22221188, 22100031

Worshipful Mayor | Deputy Mayor | Chairman, Standing Committee for Public Health | Commissioner

**Bruhat Bangalore Mahanagara Palike**